21/09/23 ಪ್ರಾತಃಮುರುಳಿ ಓಂಶಾಂತಿ ಬಾಪ್ದಾದಾ ಮಧುಬನ

"ಮಧುರ ಮಕ್ಕಳೇ - ಎಲ್ಲಿಯವರೆಗೆ ಆತ್ಮ ಪಾತ್ರ ಮಾಡುತ್ತಿರುತ್ತದೆಯೋ ಅಲ್ಲಿಯವರೆಗೆ ಆತ್ಮನಿಗೆ 100% ರೆಸ್ಟ್ (ವಿಶ್ರಾಂತಿ) ಸಿಗಲು ಸಾಧ್ಯವಿಲ್ಲ, ವಿಶ್ರಾಂತಿ ಸಿಗುವುದೇ ಪರಮಧಾಮದಲ್ಲಿ ಅಲ್ಲಿ ಯಾವುದೇ ಪಾತ್ರ ಇರುವುದಿಲ್ಲ"

ಪ್ರಶ್ನೆ: ಯಾವ ಮಕ್ಕಳು ನಡೆಯುತ್ತಾ-ನಡೆಯುತ್ತಾ ವಿದ್ಯಾಭ್ಯಾಸದಿಂದ ಸುಸ್ತಾಗಿಬಿಡುತ್ತಾರೆ- ಅವರಿಗೆ ನಂತರ ಯಾವ ಸಂಕಲ್ಪ ಬರುತ್ತದೆ, ಯಾವುದು ವಿಕಲ್ಪದ ರೂಪವನ್ನು ತಾಳುತ್ತದೆ?

ಉತ್ತರ: ಅವರಿಗೆ ತಂದೆಯನ್ನು ಬಿಟ್ಟುಬಿಡುವ ಅರ್ಥಾತ್ ವಿಚ್ಛೇಧನೆ ನೀಡುವ ಸಂಕಲ್ಪ ಬರುತ್ತದೆ. ಈ ಸಂಕಲ್ಪ ಬರುವುದು ವಿಕಲ್ಪವೆಂದು ತಂದೆ ತಿಳಿಸುತ್ತಾರೆ. ಇಂತಹ ಸಂಕಲ್ಪವನ್ನು ಮಾಡುವುದೂ ಸಹ ಪಾಪವಾಗಿದೆ. ವಿದ್ಯಾಭ್ಯಾಸ ಮಾಡದೆ ಇರುವುದೇ ಸುಸ್ತಾಗುವುದಾಗಿದೆ. ಇಂತಹ ಮಕ್ಕಳು ತಮ್ಮ ಊಟವನ್ನು ತಾವೇ ಹಾಳು ಮಾಡಿಕೊಳ್ಳುತ್ತಾರೆ. 2. ಯಾವುದೇ ಮಾತಿನಕಾರಣ ಒಂದುವೇಳೆ ಯಾರಾದರೂ ತಂದೆ-ತಾಯಿಯ ಜೊತೆ ಮುನಿಸಿಕೊಂಡರೆ ಅವರು 21 ಜನ್ಮಗಳ ರಾಜ್ಯಭಾಗ್ಯವನ್ನು ಕಳೆದುಕೊಳ್ಳುತ್ತಾರೆ.

ಗೀತೆ: ಈ ದಿನ ಅಂಧಕಾರದಲ್ಲಿ ಇದ್ದಾನೆ ಮನುಷ್ಯ............

ಓಂ ಶಾಂತಿ. ಇದು ಭಕ್ತಿಯ ಗೀತೆ ಅಥವಾ ಪ್ರಾರ್ಥನೆ ಆಗಿದೆ. ಯಾರ ಬಳಿ ಪ್ರಾರ್ಥನೆ ಮಾಡುತ್ತಾರೆ? ಭಗವಂತನ ಬಳಿ. ಆದರೆ ಘೋರ ಅಂಧಕಾರದಲ್ಲಿ ಇರುವಕಾರಣ ಭಗವಂತನನ್ನು ಅರಿತೇ ಇಲ್ಲ. ಅಂದಾಗ ಈಗ ಕೇಳುವವರು ಯಾರು? ಭಗವಂತ ಅವರ ಮೊರೆಯನ್ನು ಕೇಳಿದಾಗ ಬಂದು ಜ್ಯೋತಿಯನ್ನು ಬೆಳಗಿಸುತ್ತಾರೆ ಆದರೆ ಮಕ್ಕಳು ಭಗವಂತನನ್ನು ಅರಿತೇ ಇಲ್ಲವೆಂದಾಗ ಹೇಗೆ ಕೇಳುತ್ತಾರೆ? ಈಗ ತಾವು ಸಮ್ಮುಖದಲ್ಲಿ ಕುಳಿತಿದ್ದೀರಿ, ಭಗವಂತ ತಮ್ಮನ್ನು ಘೋರ ಅಂಧಕಾರದಿಂದ ಘೋರ ಬೆಳಕಿನ ಕಡೆ ಕರೆದೊಯ್ಯುತ್ತಿದ್ದಾರೆ. ಬ್ರಹ್ಮನ ರಾತ್ರಿ ಹಾಗೂ ಬ್ರಹ್ಮನ ಹಗಲು ಎಂದು ಗಾಯನವೂ ಸಹ ಇದೆ. ರಾತ್ರಿಯಲ್ಲಿ ಮನೆ-ಮನೆ ಅಲೆಯುವುದೂ ಬಹಳ. ಬೆಟ್ಟ-ಗುಡ್ಡಗಳಿಗೆ, ಮಂದಿರಗಳಿಗೆ, ಮಸೀದಿಗಳಿಗೆ ಹೋಗುತ್ತಾರೆ ಆದರೆ ಭಗccವಂತ ಎಲ್ಲಿ ಸಿಗುತ್ತಾರೆ? ಭಗವಂತನ ಜನ್ಮ ಭಾರತದಲ್ಲಿಯೇ ಆಚರಿಸುತ್ತಾರೆ. ಶಿವರಾತ್ರಿ ಎಂದು ಹೇಳುತ್ತಾರೆ. ಅವಶ್ಯವಾಗಿ ಅವರ ನೆನಪಾರ್ಥ ಪ್ರತಿಮೆಗಳೂ ಸಹ ಭಾರತದಲ್ಲಿಯೇ ಇದೆ ಆದರೆ ಅವರು ಎಂದು ಬರುತ್ತಾರೆಂದು ತಿಳಿದಿಲ್ಲ. ಘೋರ ಅಂಧಕಾರದಲ್ಲಿ ಇದ್ದಾರೆ. ಈಗ ತಾವು ಘೋರ ಅಂಧಕಾರದಲ್ಲಿ ಇಲ್ಲ. ತಾವು ನಂಬರ್ವಾರ್ ಪುರುಷಾರ್ಥದ ಅನುಸಾರ ಬೆಳಕಿನ ಕಡೆ ಬರುತ್ತಾಹೋಗುತ್ತೀರಿ. ಈ ಸೃಷ್ಟಿಯ ರಚನೆಯನ್ನು ಯಾರು ಮತ್ತು ಹೇಗೆ ಮಾಡುತ್ತಾರೆ ಎಂದು ತಾವು ಮಕ್ಕಳು ತಿಳಿದಿದ್ದೀರಿ.

ತಾವು ಈಗ ಈಶ್ವರೀಯ ವಿಶ್ವವಿದ್ಯಾಲಯಕ್ಕೆ ಬಂದಿದ್ದೀರಿ, ಎಲ್ಲಿ ಈಶ್ವರ ಓದಿಸಿ ಮನುಷ್ಯರಿಂದ ದೇವತೆಗಳನ್ನಾಗಿ ಮಾಡುತ್ತಾರೆ. ಈ ಜ್ಞಾನವನ್ನೂ ಸಹ ತಮ್ಮಲ್ಲಿಯೂ ನಂಬರ್ವಾರಾಗಿ ತಿಳಿಯುತ್ತಾರೆ. ಕೆಲವರು ಚೆನ್ನಾಗಿ ತಿಳಿಯುತ್ತಾರೆ. ಕೆಲವರು ಪೂರ್ಣವಾಗಿ ತಿಳಿಯದೇ ಇರುವವರು ಓಡಿಹೋಗುತ್ತಾರೆ. ತಂದೆ-ತಾಯಿಯ ಜೊತೆ ಮುನಿಸಿಕೊಳ್ಳುತ್ತಾರೆ. ಇಂತಹವರಿಗೆ ಹೇಳಲಾಗುತ್ತದೆ ಆಶ್ಚರ್ಯವಾಗಿ ತಂದೆ-ತಾಯಿಯಿಂದ ಮುನಿಸಿಕೊಳ್ಳುತ್ತಾರೆಂದು. ಪ್ರಶ್ನೆಗಳನ್ನು ಮಾಡುತ್ತಾರೆ, ಅನ್ಯರಿಗೆ ತಿಳಿಸುತ್ತಾರೆ ಮತ್ತೆ ಮುನಿಸಿಕೊಂಡು ಹೋಗಿಬಿಡುತ್ತಾರೆ..........ಮಾತಾ-ಪಿತಾರವರಿಂದ ನಮಗೆ 21 ಜನ್ಮಗಳಿಗೆ ಸ್ವರ್ಗದ ರಾಜ್ಯಭಾಗ್ಯ ಸಿಗುತ್ತದೆ ಎಂದು ತಿಳಿದುಕೊಳ್ಳುತ್ತಾರೆ ಆದರೂ ಸಹ ಮರೆತುಬಿಡುತ್ತಾರೆ. ಬಾಬಾ ತಿಳಿಸಿದ್ದಾರೆ - ಯಾವುದಕ್ಕೆ ಶಾಂತಿ ಎಂದು ಕರೆಯಲಾಗುತ್ತದೆ ಅದು ಶಾಂತಿಧಾಮ ಅಥವಾ ನಿರ್ವಾಣಧಾಮದಲ್ಲಿ ಸಿಗುತ್ತದೆ, ಅದಕ್ಕೆ ಮುಕ್ತಿಧಾಮ ಎಂದು ಕರೆಯಲಾಗುತ್ತದೆ. ಒಂದುವೇಳೆ ಯಾರಾದರೂ ನಾವು 100% ವಿಶ್ರಾಂತಿಯಲ್ಲಿ ಇದ್ದೇವೆ ಎಂದು ಹೇಳುತ್ತಾರೆ ಆದರೆ ಅಂತಹ ಶಬ್ದ ಇಲ್ಲವೇ ಇಲ್ಲ. ಪೂರ್ತಿ ದಿನದಲ್ಲಿ ಒಂದಲ್ಲಾಒಂದು ಕರ್ಮ ಅವಶ್ಯವಾಗಿ ನಡೆಯುತ್ತಿರುತ್ತದೆ. ಹಾಂ ಅಲ್ಪಕಾಲಕ್ಕೆ ರಾತ್ರಿಯ ನಿದ್ರೆಗೆ ವಿಶ್ರಾಂತಿ ಎನ್ನಲಾಗುತ್ತದೆ ಏಕೆಂದರೆ ಆತ್ಮ ಹೇಳುತ್ತದೆ ನಾನು ಪೂರ್ತಿ ದಿನ ಕೆಲಸವನ್ನು ಮಾಡಿ ಸುಸ್ತಾಗಿದ್ದೇನೆ ಈಗ ವಿಶ್ರಾಂತಿ ಪಡೆದುಕೊಳ್ಳುತ್ತೇನೆ ಎಂದು. ತನ್ನನ್ನು ತಾನು ಭಿನ್ನ (ಡಿಟಾಚ್) ಮಾಡಿಕೊಳ್ಳುತ್ತದೆ. ತಂದೆ ಶಾಂತಿದೇಶದಲ್ಲಿ ಇದ್ದಾರೆಂದಂತೂ ಗೊತ್ತಿದೆಯೋ ಅಥವಾ ಪರಮಾತ್ಮ ಅಲ್ಲಿ ವಿಶ್ರಾಂತಿ ಮಾಡುತ್ತಾರೆಂದು ತಿಳಿದುಕೊಂಡಿದ್ದೀರೋ. ಪರಮಾತ್ಮ ತನ್ನ ಪಾತ್ರ ಇಲ್ಲದೆ ಇದ್ದಾಗ ವಿಶ್ರಾಂತಿ ಮಾಡುತ್ತಾರೆ. ಮುಕ್ತಿಧಾಮದಲ್ಲಿ ಯಾವುದೇ ಕಾರ್ಯವನ್ನು ಮಾಡುವುದಿಲ್ಲ. ಇದು ತಿಳಿದುಕೊಳ್ಳುವ ದೊಡ್ಡ ಮಾತಾಗಿದೆ. ಈಗ ನಿಮ್ಮ ಬುದ್ಧಿಯ ಬೀಗ ತೆರೆಯುತ್ತಿದೆ. ನಾನು ಯಾವಾಗ ವಿಶ್ರಾಂತಿಯಲ್ಲಿ (ರೆಸ್ಟ್) ಇರುತ್ತೇನೆ ಎಂದು ನಿಮಗೆ ಗೊತ್ತಿದೆಯೇ? ತಾವು ಮಕ್ಕಳು ಯಾವಾಗ ಸ್ವರ್ಗದಲ್ಲಿ ಇರುತ್ತೀರೋ, ಸುಖದಲ್ಲಿ ಇರುತ್ತೀರೋ ಆಗ ನಾನು ವಿಶ್ರಾಂತಿಯಲ್ಲಿ ಇರುತ್ತೇನೆ. ಅಲ್ಲಿ ನಿಮಗೆ ಸುಖ-ಶಾಂತಿ ಸಿಗುತ್ತದೆ. ಅದಕ್ಕೆ ವಿಶ್ರಾಂತಿ ಎಂದು ಹೇಳಲಾಗುವುದಿಲ್ಲ. ತಮಗೆ ಯಾವುದೇ ಪಾತ್ರ ಇಲ್ಲದಿದ್ದಾಗ ವಿಶ್ರಾಂತಿ ಎಂದು ಕರೆಯಲಾಗುತ್ತದೆ. ತಾವು ಸ್ವರ್ಗದಲ್ಲಿ ಇದ್ದಾಗ ನಾನು ಯಾವುದೇ ಪರಿಶ್ರಮ ಮಾಡಬೇಕಾಗಿಲ್ಲ. ನಾನು ಅಲ್ಲಿ (ಮನೆಯಲ್ಲಿ) ಶಾಂತಿಯಲ್ಲಿ ಇರುತ್ತೇನೆ, ಶಾಂತಿಯ ಇನ್ನೊಂದು ಶಬ್ದ ವಿಶ್ರಾಂತಿ ಎಂದು ಹೇಳಲಾಗುತ್ತದೆ. ಇಲ್ಲಂತೂ ವಿಶ್ರಾಂತಿಯಲ್ಲಿ ಇರಲು ಸಾಧ್ಯವಿಲ್ಲ. ನಾನು ರಾತ್ರಿ ನಿದ್ರೆಯಲ್ಲಿ ವಿಶ್ರಾಂತಿಯಲ್ಲಿ ಇರುತ್ತೇನೆ ಎಂದು ಆತ್ಮ ಹೇಳುತ್ತದೆ, ಆ

ಸಮಯದಲ್ಲಿ ವಿಶ್ರಾಂತಿಯಲ್ಲಿ ಅಥವಾ ಶಾಂತಿಯಲ್ಲಿ ಇರುವುದು ಒಂದೇ ಮಾತಾಗಿದೆ. ರಾತ್ರಿ ಅಶರೀರಿ ಆಗಿಬಿಡುತ್ತಾರೆ, ಶಾಂತವಾಗಿಬಿಡುತ್ತಾರೆ. ನಂತರ ಎದ್ದು ಕರ್ಮದಲ್ಲಿ ಬರುತ್ತಾರೆ ಮತ್ತೆ ಅವಿಶ್ರಾಂತ (ಅನ್‌ರೆಸ್ಟ್)ರಾಗುತ್ತಾರೆ. ಕರ್ಮ ಮಾಡುತ್ತಾ ಅವಿಶ್ರಾಂತದ ಅನುಭವ ಆಗುತ್ತದೆ. ಸತ್ಯಯುಗದಲ್ಲಿ ಅವಿಶ್ರಾಂತಿಯ ಮಾತೇ ಇಲ್ಲ. ಮಾಯೆ ಅವಿಶ್ರಾಂತರನ್ನಾಗಿ ಮಾಡುತ್ತದೆ. ಅಲ್ಲಿ ನಾವು ವಿಶ್ರಾಂತಿಯಲ್ಲಿ ಇದ್ದೇವೆ ಈ ರೀತಿ ಹೇಳುವುದಿಲ್ಲ. ಕೆಲಸ ಕಾರ್ಯಗಳನ್ನು ಮಾಡುತ್ತಾರೆ ಆದರೆ ಅಶಾಂತಿ ಆಗುವುದಿಲ್ಲ. ಆದರೆ ವಿಶ್ರಾಂತಿಯ (ರೆಸ್ಟ್) ಮಾತಿಲ್ಲ. ನಾವು ವಿಶ್ರಾಂತಿಗಾಗಿ ಶಿಮ್ಲಾ ಹೋಗುತ್ತೇವೆ ಎಂದು ಹೇಳುತ್ತಾರೆ ಆದರೆ ರೆಸ್ಟಿನ ಅರ್ಥ ಇದಲ್ಲ. ಸತ್ಯವಾದಂತಹ ವಿಶ್ರಾಂತಿ ನಾವು ನಿರ್ವಾಣಧಾಮದಲ್ಲಿ ಇದ್ದಾಗ ಸಿಗುತ್ತದೆ, ಅಲ್ಲಿ ಶಾಂತವಾಗಿರುತ್ತೇವೆ. ಬಾಕಿ ವಿಶ್ರಾಂತಿಯಾರಿಗೂ ಇರುವುದಿಲ್ಲ. ಯಾರಾದರೂ ನಾವು 100% ರೆಸ್ಟಿನಲ್ಲಿ ಇದ್ದೇವೆ ಎಂದು ಹೇಳಿದರೆ ಇದು ತಪ್ಪಾಗಿದೆ. ಇದಕ್ಕೆ ಅಜ್ಞಾನ ಎಂದು ಹೇಳಲಾಗುತ್ತದೆ. ಭಲೆ ವಿದ್ಯೆಯನ್ನು ಓದಲು ಇಷ್ಟವಿಲ್ಲವೆಂದರೆ ವಿಶ್ರಾಂತಿ ತೆಗೆದುಕೊಳ್ಳುತ್ತಾರೆ ಎಂದು ಅವಶ್ಯವಾಗಿ ಹೇಳಲಾಗುತ್ತದೆ. ಓದದೆ ಇರುವುದು, ವಿಶ್ರಾಂತಿ ಪಡೆದುಕೊಳ್ಳುವುದು ಇದು ಮತ್ತೆ ಸುಸ್ತಾಗುವುದಾಗಿದೆ. ತಮ್ಮ ಊಟವನ್ನು ತಾವೇ ಕೆಡಿಸಿಕೊಳ್ಳುತ್ತಾರೆ.

ಹೇ ರಾತ್ರಿಯ ಪ್ರಯಾಣಿಕನೇ ಸ್ವರ್ಗದ ಮಾರ್ಗದಲ್ಲಿ ಹೋಗುತ್ತಾ-ಹೋಗುತ್ತಾ ಸುಸ್ತಾಗಬೇಡ, ಮುನಿಸಿಕೊಂಡು ಹೋಗಬೇಡ ಎಂದು ತಿಳಿಸಲಾಗಿದೆ. ಮಾತಾ-ಪಿತಾರವರಿಗೆ ವಿಚ್ಛೇಧನ ಕೊಡುವ ಸಂಕಲ್ಪವೂ ಸಹ ಬರಬಾರದು. ಈ ಸಂಕಲ್ಪ ಬಂದರೆ ಅದಕ್ಕೆ ವಿಕಲ್ಪ ಎಂದು ಕರೆಯಲಾಗುತ್ತದೆ. ಅಂತಹ ಮಾತಾ-ಪಿತಾ ಯಾರಿಂದ ಸ್ವರ್ಗದ ರಾಜ್ಯಭಾಗ್ಯ ಸಿಗುತ್ತದೆ ಅವರ ಪ್ರತಿ ಅಂತಹ ಸಂಕಲ್ಪವೂ ಏಕೆ ಬರಬೇಕು! ಕೆಲವೊಮ್ಮೆ ಬಿಟ್ಟುಬಿಡೋಣ ಏನೂ ಅರ್ಥ ಆಗುವುದಿಲ್ಲ ಎಂದು ಬರೆಯುತ್ತಾರೆ. ಅರೇ ಇದು ಅರ್ಥ ಮಾಡಿಕೊಳ್ಳುವ ಸಮಯ ಆಗಿದೆಯಲ್ಲವೆ. ತಿಳಿದುಕೊಳ್ಳುವುದು ಅರ್ಥಾತ್ ಓದುವುದು, ನಿಮಗೆ ಗೊತ್ತಿದೆ ನಾವು ಓದುತ್ತಿದ್ದೇವೆ. ಪರಮಪಿತ ಪರಮಾತ್ಮ ಯಾರು ಜ್ಞಾನಸಾಗರ, ಶ್ರೇಷ್ಠಾತಿಶ್ರೇಷ್ಠ ಆಗಿದ್ದಾರೋ ಅವರನ್ನು ಯಾರೂ ತಿಳಿದುಕೊಂಡಿಲ್ಲ. ಭಲೆ ಬ್ರಹ್ಮಾ-ವಿಷ್ಣು-ಶಂಕರ ಅಥವಾ ಲಕ್ಷ್ಮೀ-ನಾರಾಯಣರ ಬಗ್ಗೆ ಗೊತ್ತಿದೆ ಆದರೆ ಭಾರತವಾಸಿಯರಿಗೆ ಲಕ್ಷ್ಮೀ-ನಾರಾಯಣರು ಯಾವಾಗ ರಾಜ್ಯಭಾಗ್ಯವನ್ನು ಪಡೆದುಕೊಂಡರು ಹಾಗೂ ಯಾರು ಕೊಟ್ಟರು? ಎಂದು ತಿಳಿದಿಲ್ಲ. ಮಾಯೆ ಪೂರ್ತಿ ಘೋರ ಅಂಧಕಾರದಲ್ಲಿ ಹಾಕಿಬಿಟ್ಟಿದೆ. ರಚಯಿತ ತಂದೆ ಮನುಷ್ಯ ಸೃಷ್ಟಿಯ ರಚನೆ ಹೇಗೆ ಮಾಡುತ್ತಾರೆ? ಎಂದು ತಂದೆ ಬಂದು ತಿಳಿಸುತ್ತಾರೆ. ಇದಂತೂ ಯಾರಿಗೂ ಗೊತ್ತಿಲ್ಲ. ತಂದೆಯೇ ಕುಳಿತು ತಿಳಿಸುತ್ತಾರೆ ಪ್ರಜಾಪಿತ ಬ್ರಹ್ಮಾರವರಿಗೆ ರಚೈತನೆಂದು ಕರೆಯುವುದಿಲ್ಲ. ಪ್ರಜಾಪಿತ ಎಂದು ಹೇಳಬಹುದು. ಆದರೆ ಅವರು ರಚಿಸುವುದಿಲ್ಲಾ. ಆದರೆ ಮನುಷ್ಯರು ಹೇಳುತ್ತಾರೆ ನಮ್ಮನ್ನು ಅಲ್ಲಾರವರು ಹುಟ್ಟಿಸಿದ್ದಾರೆ ಎಂದು. ನಿರಾಕಾರ ತಂದೆಗೆ ರಚಯಿತನೆಂದು ಹೇಳಲಾಗುತ್ತದೆ. ರಚಯಿತ ತಂದೆಯನ್ನು ಮನುಷ್ಯರೇ ತಿಳಿದುಕೊಳ್ಳುತ್ತಾರೆ, ಪ್ರಾಣಿಗಳು ತಿಳಿದುಕೊಳ್ಳುವುದಿಲ್ಲ. ನಮ್ಮನ್ನು ಪರಮಾತ್ಮ ರಚಿಸಿದರೆಂದು ಪ್ರಾಣಿಗಳು ಬಾಯಿಯಿಂದ ಹೇಳುವುದಿಲ್ಲ. ಮನುಷ್ಯರು ನಮಗೆ ಭಗವಂತ ರಚಿಸಿದ್ದಾರೆಂದು ಹೇಳುತ್ತಾರೆ. ತಂದೆ ಕುಳಿತು ತಿಳಿಸುತ್ತಾರೆ - ಈ ರಚನೆಯನ್ನು ಹೇಗೆ ಮಾಡಲಾಗಿದೆ? ಎಂದು ನೋಡಿ. ಮೊದಲು-ಮೊದಲುಮುಖವಂಶಾವಳಿಯ ರಚನೆ ಆಗಿದೆ. ಮಕ್ಕಳು ದೊಡ್ಡವರಾಗಿ ನಂತರ ತಂದೆ ಆಗಬೇಕಾಗುತ್ತದೆ. ಈ ಬೇಹದ್ದಿನ ತಂದೆ ಹೇಳುತ್ತಾರೆ - ನೋಡಿ, ನಾನೂ ಸಹ ಹೇಗೆ ರಚನೆ ಮಾಡುತ್ತೇನೆ ಇವರಲ್ಲಿ ಪ್ರವೇಶ ಮಾಡಿ ಇವರ ಮುಖದ ಮೂಲಕ ಹೇಳುತ್ತೇನೆ-ಹೇ ಆತ್ಮ! ನೀವು ನನ್ನವರಾಗಿದ್ದೀರಿ, ನಾನು ನಿಮ್ಮ ತಂದೆ ಆಗಿದ್ದೇನೆ. ನಂತರ ಇವರ ಮೂಲಕ ನೀವು ಮಕ್ಕಳನ್ನು ರಚನೆ ಮಾಡುತ್ತೇನೆ. ನೀವು ಮುಖವಂಶಾವಳಿ ಆಗಿದ್ದೀರಿ. ನಾನು ಹೇಗಿದ್ದೇನೆಯೋ ಹಾಗೆಯೇ ನಿನ್ನವನಾಗಿದ್ದೇನೆ ಎಂದು ಅಜ್ಞಾನಕಾಲದಲ್ಲಿಯೂ ಹೇಳುತ್ತಾರೆ ತಂದೆಯೂ ಹಾಗೇ ಹೇಳುತ್ತಾರೆ ನೀವು ಬ್ರಹ್ಮನ ಮಕ್ಕಳಾಗಿದ್ದೀರಿ, ಈಗ ನೀವು ಮುಖವಂಶಾವಳಿಗಳು ನಂತರ ನೀವು ಕುಖವಂಶಾವಳಿಗಳೂ ಸಹ ಆಗುತ್ತೀರಿ. ನೀವು ನನ್ನವರಾಗಿದ್ದೀರಿ ನಂತರ ದೈವೀಮನತನದಲ್ಲಿ ಹೋಗುತ್ತೀರಿ ಎಂದು ತಂದೆಯು ಹೇಳುತ್ತಾರೆ. ತಂದೆ ಈಶ್ವರೀಯ ರಚನೆಯನ್ನು ಹೇಗೆ ರಚಿಸುತ್ತಾರೆ-ಇದನ್ನು ಯಾರೂ ತಿಳಿಯಲು ಸಾಧ್ಯವಿಲ್ಲ. ತಂದೆ ತಿಳಿಸುತ್ತಾರೆ-ಇವರೂ(ಬ್ರಹ್ಮಾ) ಸಹ ಹೇಳುತ್ತಾರೆ - ನಾನೂ ಸಹ ಮುಖವಂಶಾವಳಿ ಆಗುತ್ತೇನೆ. ತಂದೆಯ ಜೊತೆಗೆ ತಾಯಿಯು ಅವಶ್ಯವಾಗಿ ಬೇಕು. ನಾವು ಪ್ರಜಾಪಿತ ಬ್ರಹ್ಮನ ಮುಖವಂಶಾವಳಿ ಎಂದು ನೀವು ಹೇಳುತ್ತೀರಿ. ಶಿವತಂದೆ ನಮ್ಮನ್ನು ತನ್ನವರನ್ನಾಗಿ ಮಾಡಿಕೊಂಡಿದ್ದಾರೆ, ಅವರಿಗೆ ಶರೀರ ಬೇಕಲ್ಲವೆ. ಶಿವಬಾಬಾರವರಿಗಾದರೂ ಶರೀರ ಇಲ್ಲ. ಶರೀರದ ಆಧಾರ ತೆಗೆದುಕೊಳ್ಳಬೇಕಾಗುತ್ತದೆ. ನಂತರ ನೀವು ನನ್ನವರು ಎಂದು ಹೇಳುತ್ತಾರೆ. ಇದಕ್ಕೆ ಮುಖವಂಶಾವಳಿಗಳೆಂದು ಕರೆಯಲಾಗುತ್ತದೆ. ಶಿವತಂದೆ ಈ ಪತ್ನಿಯ (ಬ್ರಹ್ಮಾ) ಮೂಲಕ ಹೇಳುತ್ತಾರೆ ನೀವು ನನ್ನ ಮಕ್ಕಳಾಗಿದ್ದೀರಿ, ಯಾವುದೇ ಶಾಸ್ತ್ರದಲ್ಲಿ ಈ ಮಾತಿಲ್ಲ. ಇದನ್ನು ತಂದೆಯೇ ತಿಳಿಸುತ್ತಾರೆ. ಇದನ್ನು ನೀವು ಕೇಳುತ್ತೀರಿ ನಂತರ ಪ್ರಾಯಃಲೋಪವಾಗುತ್ತದೆ.

ಈ ಸಮಯದಲ್ಲಿ ಘೋರ ಅಂಧಕಾರವಿದೆ. ತಂದೆ ಬಂದು ಬೆಳಕನ್ನು ತರುತ್ತಾರೆ ಆದ್ದರಿಂದಲೇ ಬ್ರಹ್ಮನ ರಾತ್ರಿ, ಬ್ರಹ್ಮನ ದಿನ ಎಂದು ಗಾಯನ ಮಾಡಲಾಗಿದೆ. ಸುಳ್ಳೇ ಸುಳ್ಳು ಅಂಶ ಮಾತ್ರವೂ ಸತ್ಯವಿಲ್ಲ ಎಂಬ ಮಾತೂ ಸಹ ಇದೆ ಆದರೆ ತಂದೆಯು ತಿಳಿಸುತ್ತಾರೆ - ಏನಾದರೂ ಸ್ವಲ್ಪ ಇರುತ್ತದೆ, ಪ್ರಳಯವಾಗುವುದಿಲ್ಲ. ಸ್ವಲ್ಪ ಇರುತ್ತದೆ ನಂತರ ವೃಕ್ಷ ವೃದ್ಧಿಯನ್ನು ಹೊಂದುತ್ತದೆ. ಮನುಷ್ಯರು ಮಹಾಪ್ರಳಯವನ್ನು ತೋರಿಸಿದ್ದಾರೆ ಆದರೆ ಮಹಾಪ್ರಳಯ ಎಂದೂ ಆಗುವುದಿಲ್ಲ. ಸಾಗರದಲ್ಲಿ ಆಲದ ಎಲೆಯ ಮೇಲೆ ಮಗು ತೇಲಿ ಬರಲು ಸಾಧ್ಯವಿಲ್ಲ. ಇದೆಲ್ಲವೂ ಕಟ್ಟುಕತೆಯಾಗಿದೆ. ನೀವು ಯಾವಾಗ ಗರ್ಭ ಮಹಲಿನಲ್ಲಿ ಇರುತ್ತೀರೋ ಅಲ್ಲಿ

ಆನಂದದಿಂದ ಇರುತ್ತೀರಿ ಎಂದು ತಂದೆಯು ತಿಳಿಸಿದ್ದಾರೆ. ಅಲ್ಲಿ ದುಃಖ, ಪಾಪ ಕರ್ಮ ಇರುವುದಿಲ್ಲ. ಅದು ಪುಣ್ಯಾತ್ಮಗಳ ಜಗತ್ತಾಗಿದೆ. ಇದು ಪಾಪಾತ್ಮಗಳ ಜಗತ್ತು. ಇಲ್ಲಿ ಎಲ್ಲವನ್ನೂ ತ್ಯಾಗಮಾಡಿ ನೀವು ಸದಾಪುಣ್ಯಾತ್ಮರಾಗುತ್ತೀರಿ. ನೀವು ಇಷ್ಟೊಂದು ಪುಣ್ಯ ಮಾಡುತ್ತೀರಿ ಅದರಿಂದ ಅರ್ಧಕಲ್ಪ ನಿಮ್ಮನ್ನುಯಾರೂ ಪಾಪಾತ್ಮರೆಂದುಕರೆಯುವುದಿಲ್ಲ. ನೀವು ಅವಿನಾಶಿಯಾದ ಪುಣ್ಯಾತ್ಮರಾಗುತ್ತೀರಿ. ನಂತರ ಅರ್ಧಕಲ್ಪ ಪಾಪಾತ್ಮ ರೆಂದು ಹೇಳುತ್ತಾರೆ. ಘಳಿಗೆ-ಘಳಿಗೆಗೆದಾನ-ಪುಣ್ಯವನ್ನು ಮಾಡುತ್ತಿರುತ್ತಾರೆ. ಭಾರತವನ್ನು ಸಂಪೂರ್ಣ ಧರ್ಮಾತ್ಮನೆಂದು ಕರೆಯಲಾಗುತ್ತದೆ. ಭಾರತದಲ್ಲಿ ದಾನ-ಪುಣ್ಯಗಳನ್ನು ಮಾಡುತ್ತಾರೆ. ನಾವು ಈ ಜಗತ್ತನ್ನು ಬಿಡುವವರಿದ್ದೇವೆ ಎಂದು ನಿಮಗೆ ತಿಳಿದಿದೆ. ಮತ್ತೆ ಇಲ್ಲಿಗೆ ಬರುವುದಿಲ್ಲ. ಈ ಜಗತ್ತಿನ ಸಾಮಾಗ್ರಿಗಳನ್ನು ಹೊಸ ಜಗತ್ತಿಗೆ ನೀವು ವರ್ಗಾವಣೆ ಮಾಡುತ್ತೀರಿ. ಮನುಷ್ಯರು ಈಶ್ವರಾರ್ಪಣೆ ಮಾಡುತ್ತಾರೆ ಅರ್ಥಾತ್ ಟ್ರಾನ್ಸ್ ಫರ್ ಮಾಡುತ್ತಾರೆ ಮತ್ತೊಂದು ಜನ್ಮಕ್ಕೆ ನೀವು 21 ಜನ್ಮಗಳಿಗೆ ಟ್ರಾನ್ಸ್ ಫರ್ ಮಾಡುತ್ತೀರಿ ಅಂದಾಗ ಬಹಳ ಬೇಕಲ್ಲವೇ. ನಿಮ್ಮಿಂದ ಎಲ್ಲಾ ಕಳಪೆವಸ್ತುವನ್ನು ತೆಗೆದುಕೊಂಡು ಹೊಸದನ್ನು ಕೊಡುತ್ತೇನೆ. ಹಳೆಯದನ್ನು ತೆಗೆದುಕೊಂಡು ಚೆನ್ನದ ಸಮಾನವಾಗಿರುವುದನ್ನು ಕೊಡಲಾಗುತ್ತದೆ. ನೀವು ಸತ್ಯತೆಯಿಂದ ತಂದೆಗೆ ಕೊಡುತ್ತೀರಿ, ತಂದೆಯೂ ಸಹ ತಮಗೆ ಎಲ್ಲವನ್ನು ಕೊಡುತ್ತಾರೆ. ನಿಮ್ಮ ಪಾತ್ರ ಏನು ನಡೆಯುತ್ತಾ ಬಂದಿದೆಯೋ ಇದು ಡ್ರಾಮಾದಲ್ಲಿ ಇತ್ತು. ಎಲ್ಲರೂ ಮನೆಯನ್ನು ಬಿಟ್ಟರು, ಇಲ್ಲದಿದ್ದರೆ ಗೋಶಾಲೆ ಹೇಗಾಗುತ್ತಿತ್ತು. ಭಟ್ಟಿ ಹೇಗೆ ಆಗುತ್ತದೆ! ಎಂಬುದನ್ನು ಮನುಷ್ಯರು ತಿಳಿದಿಲ್ಲ. ಬೆಕ್ಕಿನ ಮರಿಗಳ ರಕ್ಷಣೆ ಬಗ್ಗೆ ಲೌಕಿಕದಲ್ಲಿ ತೋರಿಸುತ್ತಾರೆ.

ಈ ಎಲ್ಲಾ ಜ್ಞಾನ ನೀವು ಮಕ್ಕಳ ಬುದ್ಧಿಯಲ್ಲಿದೆ. ನಂತರ ಈ ಜ್ಞಾನ ಇರುವುದಿಲ್ಲ. ನಾವು 21 ಜನ್ಮ ರಾಜ್ಯಭಾರ ಮಾಡುತ್ತೇವೆ, ನಂತರ ಕೆಳಗೆ ಇಳಿಯುತ್ತೇವೆ ಎಂಬ ಜ್ಞಾನ ಅಲ್ಲಿ ಇರುವುದಿಲ್ಲ. ತ್ರಿಕಾಲದರ್ಶಿಯ ಪಾತ್ರ ಈಗ ನಿಮ್ಮಲ್ಲಿ ಇರುತ್ತದೆ. ಮುಖ್ಯ ನಾಯಕ-ನಾಯಿಕಿಯ ಪಾತ್ರ ನಿಮದೇ ಆಗಿದೆ. ಬೇರೆ ಯಾರದ್ದೂ ಇಲ್ಲ. ಅಸುರರಿಂದ ದೇವತೆ ನಂತರ ದೇವತೆಯಿಂದ ಅಸುರರು ನೀವು ಭಾರತವಾಸಿಗಳೇ ಆಗುತ್ತೀರಿ. ಉಳಿದದ್ದು ಮಧ್ಯದ ಭಾಗಗಳಾಗಿದೆ. ನಾಟಕದ ಮಧ್ಯದಲ್ಲಿ ಹಾಸ್ಯ ಪ್ರಸಂಗಗಳೂ ಸಹ ಮಾಡುತ್ತಾರಲ್ಲವೆ. ಅರ್ಧಕಲ್ಪದ ನಂತರ ದೇವೀ-ದೇವತಾ ಧರ್ಮ ಪ್ರಾಯಃಲೋಪವಾಗುತ್ತದೆ. ನಿಮ್ಮ ಬುದ್ಧಿಯಲ್ಲಿ ಈ ಎಲ್ಲಾ ಚಕ್ರ ತಿರುಗುತ್ತಿರುತ್ತದೆ, ಆದ್ದರಿಂದ ನೀವು ತಿಳಿಸುತ್ತೀರಲ್ಲವೆ. ಪರಮಪಿತ ಪರಮಾತ್ಮ ಪರಮಧಾಮದಲ್ಲಿ ಇರುವಂತಹವರು. ನನ್ನಲ್ಲಿ ಎಲ್ಲಾ ಜ್ಞಾನವಿದೆ ಎಂದು ತಂದೆಯು ಹೇಳುತ್ತಾರೆ. ನಾನು ಮನುಷ್ಯ ಸೃಷ್ಟಿಯ ಬೀಜರೂಪ ಚೈತನ್ಯ ಆಗಿದ್ದೇನೆ. ಅದಾದರೂ ಜಡಬೀಜವಾಗಿದೆ, ಶಿವಚೈತನ್ಯವಾಗಿದ್ದಾರೆ. ಅವರ ಪ್ರತಿಮೆಯನ್ನು ಪೂಜಿಸಲಾಗುತ್ತದೆ.

ಸರ್ಕಾರದವರೂ ಸಹ ಸಸಿಗಳನ್ನು ನಾಟಿ ಮಾಡುತ್ತಾರೆ. ಇವರು ಚೈತನ್ಯ ಬೀಜ, ಮನುಷ್ಯಸೃಷ್ಟಿ ವೃಕ್ಷದ ಬೀಜ ಎಂದು ಹೇಳಲಾಗುತ್ತದೆ. ನನ್ನಲ್ಲಿ ಇಡೀ ವೃಕ್ಷದ ಜ್ಞಾನವಿದೆ. ಯಾರಾದರೂ ನನಗೆ 100% ವಿಶ್ರಾಮವಿದೆ ಎಂದು ಹೇಳಿದರೆ ಇದು ಎಂದೂ ಸಿಗಲು ಸಾಧ್ಯವಿಲ್ಲ ಎಂದು ಹೇಳಬೇಕು. ಸ್ವರ್ಗದಲ್ಲಿ 100% ಪವಿತ್ರತೆ, ಸುಖ, ಶಾಂತಿ ಇರುತ್ತದೆ ಎಂದು ಹೇಳಬಹುದು. ಹೆಸರೇ ಸ್ವರ್ಗವಾಗಿದೆ. ತಂದೆಗೆ ಸತ್ಯ ಶ್ರೀ ಅಕಾಲ ಎಂದು ಹೇಳಲಾಗುತ್ತದೆ. ಸತ್ಯವನ್ನು ತಿಳಿಸುವವರು. ಅವರನ್ನು ಯಾವುದೇ ಮೃತ್ಯು ತಿನ್ನುವುದಿಲ್ಲ. ಅವರಿಗೆ ಕಾಲರಿಗಿಂತ ಕಾಲರು ಎಂದು ಕರೆಯಲಾಗುತ್ತದೆ. ತಂದೆ ತಿಳಿಸುತ್ತಾರೆ ಇದು ಛೀ-ಛೀ ಪ್ರಪಂಚವಾಗಿದೆ. ಈ ಕಾಡಿಗೆ ಅವಶ್ಯವಾಗಿ ಬೆಂಕಿ ಬೀಳಲಿದೆ. ತಾವು ಮಕ್ಕಳಿಗೆ ಗೊತ್ತಿದೆ ಈ ಮಹಾಭಾರತ ಯುದ್ಧ ಮಹಾಕಲ್ಯಾಣಕಾರಿ ಆಗಿದೆ. ಮನುಷ್ಯರು ಶಾಂತವಾಗಲಿ ಎಂದು ಯಜ್ಞವನ್ನು ಮಾಡುತ್ತಾರೆ, ಸ್ವರ್ಗದ ಬಾಗಿಲು ತೆರಯಬಾರದು ಎಂದು ತಿಳಿಯುತ್ತಾರೆ. ನೀವಂತೂ ಚಪ್ಪಾಳಿ ತಟ್ಟುತ್ತೀರಿ, ಕಾಡಿಗೆ ಬೆಂಕಿ ಬಿದ್ದಾಗ ನಾವು ಹೊಸ ಪ್ರಪಂಚ ವೈಕುಂಠಕ್ಕೆ ಹೋಗುತ್ತೇವೆ. ಈ ವಿನಾಶದ ಜ್ವಾಲೆ ರುದ್ರ ಜ್ಞಾನ ಯಜ್ಞದಿಂದಲೇ ಪ್ರಜ್ವಲಿತವಾಗಿದೆ. ಯಾರು ತಂದೆಯವರಾಗುತ್ತಾರೋ ಅವರು ಸ್ವರ್ಗದ ಮಾಲೀಕರಾಗುತ್ತಾರೆ. ಉಳಿದವರು ಲೆಕ್ಕಾಚಾರವನ್ನು ಸಮಾಪ್ತಿ ಮಾಡಿ ಮರಳಿಹೋಗಬೇಕಾಗಿದೆ. ವಾಪಸ್ ಮುಕ್ತಿಧಾಮಕ್ಕೆ ಹೋಗಿ ಮತ್ತೆ ತಮ್ಮ ಪಾತ್ರವನ್ನು ರಿಪೀಟ್ ಮಾಡಬೇಕಾಗುತ್ತದೆ ಎಂಬುದನ್ನು ನೀವು ತಿಳಿದಿದ್ದೀರಿ. ಸತ್ಯಯುಗದಲ್ಲಿ ಇಷ್ಟೆಲ್ಲಾ ದೇವೀ-ದೇವತೆಗಳು ಎಲ್ಲಿಂದ ಬಂದರು? ಮನುಷ್ಯರಿಂದ ದೇವತೆಯನ್ನಾಗಿ ಮಾಡಿದರು. ತಮ್ಮನ್ನು ಕವಡೆಯಿಂದ ವಜ್ರದಂತೆ, ಪತಿತರಿಂದ ಪಾವನರನ್ನಾಗಿ ಮಾಡುತ್ತಾರೆ. ಯಾರು ಎಷ್ಟು ಜ್ಞಾನವನ್ನು ಧಾರಣೆ ಮಾಡುತ್ತಾರೆ ಅಷ್ಟು ಪದವಿಯನ್ನು ಪಡೆಯುತ್ತಾರೆ. ರಾಜಧಾನಿ ಸ್ಥಾಪನೆ ಆಗುತ್ತಿದೆ. ನಿಮಗೆ ಗೊತ್ತಿದೆ ನಾವು ನಮಗಾಗಿ ಸ್ವರ್ಗದ ಸ್ಥಾಪನೆ ಮಾಡುತ್ತಿದ್ದೇವೆ ಶ್ರೀಮತದ ಮೇಲೆ. ಒಂದುವೇಳೆ ಶ್ರೀಮತದಿಂದ ಯಾರಾದರೂ ಮುನಿಸಿಕೊಂಡು ತಮ್ಮ ಮತದ ಮೇಲೆ ನಡೆದರೆ ಅದು ರಾವಣನ ಮತ ಆಗಿಬಿಡುತ್ತದೆ. ಆದ್ದರಿಂದ ಹೆಜ್ಜೆ-ಹೆಜ್ಜೆಯಲ್ಲಿ ನೀವು ಶ್ರೀಮತ ಪಡೆದುಕೊಳ್ಳುತ್ತಿರಿ. ತಂದೆ ನಿಮ್ಮನ್ನು ಜೀವಿಸಿದ್ದೇ-ಟ್ರಸ್ಟಿಯನ್ನಾಗಿ ಮಾಡುತ್ತಾರೆ. ಒಳ್ಳೆಯದು!

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಸಂಪೂರ್ಣ ದಾನಿ ಆಗಬೇಕು. ಸತ್ಯತೆಯಿಂದ ಎಲ್ಲವನ್ನು ತಂದೆಗೆ ಅರ್ಪಣೆ ಮಾಡಿ ಹೊಸ ಪ್ರಪಂಚಕ್ಕಾಗಿ ಟ್ರಾನ್ಸ್ ಫರ್ ಮಾಡಿಬಿಡಬೇಕು.

2. ಬದುಕಿದ್ದರೂ ನಿಮಿತ್ತರಾಗಬೇಕು. ಹೆಜ್ಜೆ-ಹೆಜ್ಜೆಯಲ್ಲಿ ತಂದೆಯಿಂದ ಶ್ರೀಮತವನ್ನು ಪಡೆದುಕೊಳ್ಳಬೇಕು. ಎಂದೂ ಸಹ ಶ್ರೀಮತದಿಂದ ಮುನಿಸಿಕೊಂಡು ಮನ್ಮತದ ಮೇಲೆ ನಡೆಯಬಾರದು.

ವರದಾನ: ಕಂಭೈಂಡ್ ರೂಪಧಾರಿಯಾಗಿ ಸೇವೆಯಲ್ಲಿ ಈಶ್ವರೀಯ ಜಾದೂವಿನ ಅನುಭವ ಮಾಡುವಂತಹ ಈಶ್ವರೀಯ ಸೇವಾಧಾರಿ ಭವ.

ಸ್ವಯಂ ಅನ್ನು ಕೇವಲ ಸೇವಾಧಾರಿ ಅಲ್ಲ, ಆದರೆ ಈಶ್ವರೀಯ ಸೇವಾಧಾರಿ ಎಂದು ತಿಳಿದು ಸೇವೆ ಮಾಡಿ. ಈ ಸ್ಮೃತಿಯಿಂದ ನೆನಪು ಮತ್ತು ಸೇವೆ ಸ್ವತಃ ಕಂಭೈಂಡ್ ಆಗಿ ಬಿಡುವುದು. ಯಾವಾಗ ಖುದಾನನ್ನು ಸೇವೆಯಿಂದ ಬೇರೆ ಮಾಡಿದ್ದೇ ಆದಲ್ಲಿ ಒಂಟಿಯಾಗುವ ಕಾರಣ ಸಫಲತೆಯ ಗುರಿ ದೂರ ಕಂಡು ಬರುವುದು. ಆದ್ದರಿಂದ ಕೇವಲ ಸೇವಾಧಾರಿ ಅಲ್ಲ, ಆದರೆ ಈಶ್ವರೀಯ ಸೇವಾಧಾರಿಯಾಗಿದ್ದೇನೆ - ಈ ಹೆಸರು ಸದಾ ನೆನಪಿನಲ್ಲಿರಲಿ. ಆಗ ಸೇವೆಯಲ್ಲಿ ಸ್ವತಃ ಈಶ್ವರೀಯ ಜಾದೂ ತುಂಬಿ ಬಿಡುವುದು ಮತ್ತು ಅಸಂಭವ ಸಹ ಸಂಭವವಾಗಿ ಬಿಡುವುದು.

ಸ್ಲೋಗನ್: ಕರ್ಮಯೋಗಿಗಳಾಗಬೇಕಾದರೆ ಕಮಲ ಆಸನಧಾರಿ (ನ್ಯಾರಾ ಮತ್ತು ಪ್ಯಾರಾ) ಆಗಿ.